CPMG / KA / BG. GPO - 13 / 2000

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

| ಭಾಗ - I | ಬೆಂಗಳೂರು, ಗುರುವಾರ, ಫೆಬ್ರವರಿ ೧೪, ೨೦೦೨ (ಮಾಘ ೨೫ ಶಕ ವರ್ಷ ೧೯೨೩) | ನಂ. ೧೫೪ |
|---|---|---|

**ಶಿಕ್ಷಣ ಸಚಿವಾಲಯ.**

ವಿಷಯ: ಇಂಜನಿಯರಿಂಗ್, ವೈದ್ಯಕೀಯ ಮತ್ತು ದಂತ ಕೋರ್ಸುಗಳಿಗೆ ಅಭ್ಯರ್ಥಿಗಳ ಆಯ್ಕೆಗೆ ಗ್ರಾಮೀಣ ಅಭ್ಯರ್ಥಿಗಳನ್ನು ಪರಿಗಣಿಸುವ ಕುರಿತು.

ಓದಲಾಗಿದೆ 1. ದಿನಾಂಕ:29-07-94 ಸಂಖ್ಯೆ:ಇಡಿ 189 ಟಿಜಿಎಲ್ 94 ರ ಸರ್ಕಾರಿ ಅಧಿಸೂಚನೆ.

2. ಸರ್ಕಾರಿ ಅಧಿಸೂಚನೆ ಸಂಖ್ಯೆ: ಸಂವ್ಯಾ ಶೀ 59 ಶಾಸನ 2000 ದಿನಾಂಕ : 22-01-2001.

3. ದಿನಾಂಕ: 05-01-2002ರ ಸಂಖ್ಯೆ: ಸಾಪ್ರಪಘ : ಗ್ರಾಆಮಿ: 2002ರ ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕದ ವಿಶೇಷಾಧಿಕಾರಿಯವರ ಪತ್ರ

ಪ್ರಸ್ತಾವನೆ:

ವೃತ್ತಿಪರ ಕೋರ್ಸುಗಳ ಪ್ರವೇಶಕ್ಕೆ 50 ಸಾವಿರ ಜನಸಂಖ್ಯೆಯುಳ್ಳ ಪ್ರದೇಶದಲ್ಲಿ ಅಧ್ಯಯನ ಮಾಡಿದ ಅಭ್ಯರ್ಥಿಗಳನ್ನು ಗ್ರಾಮೀಣ ಪ್ರದೇಶದ ಅಭ್ಯರ್ಥಿಯೆಂದು ಪರಿಗಣಿಸಲು ಮೇಲೆ ಓದಲಾದ (1) ರ ಸರ್ಕಾರಿ ಅಧಿಸೂಚನೆಯಲ್ಲಿ 1984ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಪ್ರೊಹಿಬಿಷನ್ ಆಫ ಕ್ಯಾಪಿಟೇಶನ್ ಫೀ) ನಿಯಮಾವಳಿಗಳ ನಿಯಮ 14(1)ಕ್ಕೆ ತಿದ್ದುಪಡಿ ಮಾಡಲಾಗಿತ್ತು.

ಮೇಲೆ ಓದಲಾದ (2)ರ ಸರ್ಕಾರ ಅಧಿಸೂಚನೆಯಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆ ನೇರ ನೇಮಕಾತಿಗೆ ಈ ಕೆಳಕಂಡವರನ್ನು ಗ್ರಾಮೀಣ ಅಭ್ಯರ್ಥಿಯೆಂದು ಪರಿಗಣಿಸಲು ಸೂಚಿಸಲಾಗಿದೆ.

Rural candidates means a candidate, who has studied:-

i) From first standard to tenth standard where the qualifying examination prescribed for a post is S.S.L.C or higher

OR

ii) From first standard to qualifying examination where the qualifying examination prescribed for a post is lower than S.S.L.C

in a school situated in any area other than a larger urban area, smaller urban area or transitional area specified under the Karnataka Municipal Corporations Act, 1976 or the Karnataka Municipalities Act, 1964

ಮೇಲೆ ಓದಲಾದ (3) ರ ಪತ್ರದಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕದ ವಿಶೇಷಾಧಿಕಾರಿಯವರು ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕದಲ್ಲಿ 1991ರ ಜನಗಣತಿ ಆಧರಿಸಿ 50,000 ಜನಸಂಖ್ಯೆ ಇರುವ ಪ್ರದೇಶದಲ್ಲಿ 1ನೇ ತರಗತಿಯಿಂದ ಅರ್ಹತಾ ಪರೀಕ್ಷೆವರೆಗೆ ವ್ಯಾಸಂಗ ಮಾಡಿದ ಅಭ್ಯರ್ಥಿಗಳೆಂದು ಪರಿಗಣಿಸಿ ಗ್ರಾಮೀಣ ಕೋಟಾದಡಿ ಸೀಟು ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ. ನೇಮಕಾತಿ ಉದ್ದೇಶಕ್ಕೆ ಗ್ರಾಮೀಣ ಅಭ್ಯರ್ಥಿಯಾಗಿ ಯಾರನ್ನು ಪರಿಗಣಿಸಬೇಕೆಂದು ಕಾನೂನು ಇಲಾಖೆಯ ದಿನಾಂಕ 22-01-2001ರ ಅಧಿಸೂಚನೆಯಲ್ಲಿ

ತಿಳಿಸಲಾಗಿರುವುದರಿಂದ ಸಾಮಾನ್ಯ ಪ್ರವೇಶ ಪರೀಕ್ಷಾ ಸೀಟು ಆಯ್ಕೆ ಪ್ರಕ್ರಿಯೆಯಲ್ಲಿ ಗ್ರಾಮೀಣ ಅಭ್ಯರ್ಥಿಯನ್ನು ಗುರ್ತಿಸುವ ಬಗ್ಗೆ ಸರ್ಕಾರದಿಂದ ಸ್ಪಷ್ಟೀಕರಣ ಕೋರಿದ್ದಾರೆ.

ವಿಷಯವನ್ನು ಪರಿಶೀಲಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ : ಇಡಿ 01 ಟಿಇಸಿ 2002 ಬೆಂಗಳೂರು, ದಿನಾಂಕ : 01-02-2002**

ಪ್ರಸ್ತುತ ಜಾರಿಯಲ್ಲಿರುವ 1997ರ ಕರ್ನಾಟಕ ಇಂಜಿನಿಯರಿಂಗ್, ವೈದ್ಯಕೀಯ ಮತ್ತು ದಂತ ಕೋರ್ಸುಗಳಿಗೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿ ಅನ್ವಯ 2002-2003 ನೇ ಶೈಕ್ಷಣಿಕ ಸಾಲಿನಿಂದ ವೈದ್ಯಕೀಯ ದಂತ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಸೀಟುಗಳ ಗ್ರಾಮೀಣ ಕೋಟಾದಲ್ಲಿ ಪ್ರವೇಶಾತಿ ನೀಡುವಾಗ ಈ ಕೆಳಕಂಡವರನ್ನು ಗ್ರಾಮೀಣ ಅಭ್ಯರ್ಥಿಗಳೆಂದು ಪರಿಗಣಿಸತಕ್ಕದ್ದು.

" ಕರ್ನಾಟಕ ಮುನಿಸಿಪಾಲಿಟೀಸ್ ಆಕ್ಟ್, 1964 ಅಥವಾ ಕರ್ನಾಟಕ ಮುನಿಸಿಪಾಲಿಟೀಸ್ ಕಾರ್ಪೊರೇಷನ್ಸ್ ಆಕ್ಟ್ 1976 ರಡಿಯಲ್ಲಿ ನಿಗದಿಪಡಿಸಿರುವ ವಿಶಾಲವಾದ ನಗರ ಪ್ರದೇಶ (Large urban area), ಚಿಕ್ಕ ನಗರ ಪ್ರದೇಶ (Smaller urban area) ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶ (Transitional area) ಇವುಗಳನ್ನು ಹೊರತುಪಡಿಸಿದ ಪ್ರದೇಶಗಳಲ್ಲಿರುವ ಶಾಲೆಗಳಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುವವರು."

ಈ ಬಗ್ಗೆ 1997ರ ಕರ್ನಾಟಕ ಇಂಜಿನಿಯರಿಂಗ್, ವೈದ್ಯಕೀಯ ಮತ್ತು ದಂತ ಕೋರ್ಸುಗಳಿಗೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿಗಳಿಗೆ ಪ್ರತ್ಯೇಕವಾಗಿ ಅಗತ್ಯ ತಿದ್ದುಪಡಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ.ಎಸ್.ವೇಣುಗೋಪಾಲ್**
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ

ಸರ್ಕಾರಿ ಹೊರವಲಯ ಮುದ್ರಣಾಲಯ, ಬೆಂಗಳೂರು - 560 059.